ಗುರುವಾರ ದಿನಾಂಕ ೪ನೇ ಜೂನ್ ೧೯೮೮ ಜ್ಯೇಷ್ಠ ೧೪, ೧೯೧೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆ ೦೫ ನಿಮಿಷಕ್ಕೆ ಸಮಾವೇಶಗೊಂಡಿತು.

[ಸನ್ಮಾನ್ಯ ಉಪಾಧ್ಯಕ್ಷರಾದ (ಶ್ರೀ ಬಿ. ಆರ್. ಯಾವಗಲ್) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಪಶುವೈದ್ಯ ಶಾಲೆಗಳಲ್ಲಿ ಸಲಕರಣೆಗಳ ಕೊರತೆ

೧೯೮೮ ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ವಸತಿ ಹಾಗೂ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರ ಮತ್ತು ಮೈಸೂರು ಜಿಲ್ಲೆಯಲ್ಲಿರತಕ್ಕ ಪಶುವೈದ್ಯ ಶಾಲೆಗಳೆಷ್ಟು ?

ಆ) ಆ ಪೈಕಿ ಸ್ವಂತ ಸರ್ಕಾರಿ ಕಟ್ಟಡದಲ್ಲಿರತಕ್ಕವೆಷ್ಟು ? ಬಾಡಿಗೆ ಕಟ್ಟಡದಲ್ಲಿರತಕ್ಕವೆಷ್ಟು ? ಇವುಗಳಲ್ಲಿ ಬಹುತೇಕ ಪಶುವೈದ್ಯ ಶಾಲೆಗಳು ಸಲಕರಣೆಗಳ ಕೊರತೆಯಿಂದ ಪ್ರಾಣಿಗಳಿಗೆ ಸುಮ್ಮವಷ್ಟಿತ ಚಿಕಿತ್ಸೆ ಮಾಡಲಾಗದಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದೂ ಸರ್ಕಾರದ ಗಮನಕ್ಕೆ ಬಂದಿದೆಯೆ,

ಇ) ಹಾಗಿದ್ದಲ್ಲಿ ಈ ಅನಾನುಕೂಲ ತಪ್ಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಹಮದ್ ಮೊಯಿನುದ್ದೀನ್ (ವಸತಿ ಹಾಗೂ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು).—

ಅ) ಮೈಸೂರು ನಗರದಲ್ಲಿರುವ ಪಶುವೈದ್ಯ ಶಾಲೆಗಳು :

	ಪಶುವೈದ್ಯ ಆಸ್ಪತ್ರೆ	೨
	ಪಶುವೈದ್ಯ ಶಾಲೆ	೨
		೪
ಮೈಸೂರು ಜಿಲ್ಲೆಯಲ್ಲಿರುವ ಪಶುವೈದ್ಯ ಶಾಲೆಗಳು (ನಗರ ಬಿಟ್ಟು)	ಪಶುವೈದ್ಯ ಶಾಲೆ	೩೦
	ಗ್ರಾಮೀಣ ಪಶುವೈದ್ಯ ಶಾಲೆ	೫೬
		೮೬

ಆ ಪೈಕಿ ೮೮ ಪಶುವೈದ್ಯ ಶಾಲೆಗಳು ಸರ್ಕಾರಿ ಕಟ್ಟಡದಲ್ಲಿವೆ, ೨ ಪಶುವೈದ್ಯ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ.

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಉಪಾಧ್ಯಕ್ಷರೇ, ಅನೇಕ ಪಶುವೈದ್ಯ ಶಾಲೆಗಳಿಗೆ ಇವತ್ತೂ ಕೂಡಾ ಸರಕಾರದ ಕಟ್ಟಡ ಇಲ್ಲ. ಮೈಸೂರು ನಗರದಲ್ಲಿ ಒಂದು ಪಶುವೈದ್ಯ ಶಾಲೆ ಸುಮಾರು ೫೦ ವರ್ಷದಿಂದ ಇದೆ. ಅದು ಈಗಲೂ ಕೂಡಾ ನಂಜರಾಜಬಹದ್ದೂರ್ ಛತ್ರಕ್ಕೆ ಸೇರಿದ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಆ ಪಶುವೈದ್ಯ ಶಾಲೆಗೆ ಸ್ವಂತ ಕಟ್ಟಡ ಇಲ್ಲ. ಇದಕ್ಕೆ ಸ್ವಂತ ಕಟ್ಟಡ ಮಾಡಲಿಕ್ಕೆ ಸರಕಾರದಲ್ಲಿ ಚೈತನ್ಯ ಇಲ್ಲವೇ ಕೇಂದ್ರ ಸರಕಾರದವರು ಇದರಲ್ಲಿ ಅರ್ಧ ಖರ್ಚನ್ನು ನಿರ್ವಹಿಸುವುದರಿಂದ, ರಾಜ್ಯಸರಕಾರದವರು ಇನ್ನು ಅರ್ಧ ಖರ್ಚನ್ನು ಕೊಟ್ಟು, ಪಶುವೈದ್ಯಶಾಲೆಗೆ ಸ್ವಂತ ಕಟ್ಟಡ ಮಾಡುವುದಕ್ಕೆ ಏತಕ್ಕೆ ಏರ್ಪಾಡು ಮಾಡಿಲ್ಲ. ಇದು ಮೊದಲನೇ ಪ್ರಶ್ನೆ. ಇನ್ನು ಎರಡನೆಯದು ಎಂದರೆ ಈ ಪಶುವೈದ್ಯಶಾಲೆಗಳಲ್ಲಿ ಜಾನುವಾರುಗಳಿಗೆ ಶಸ್ತ್ರಚಿಕಿತ್ಸೆ ಮಾಡುವುದಕ್ಕೆ ಏನೂ ಏರ್ಪಾಡು ಮಾಡಿಲ್ಲ. ಅನೇಕ ಪಶುಗಳಿಗೆ ಶಸ್ತ್ರಚಿಕಿತ್ಸೆ ಅವಶ್ಯಕತೆ ಇದ್ದಾಗಲೂ ಕೂಡಾ ಅದರ ಅನುಕೂಲತೆ ಇಲ್ಲದೆ ಇದ್ದ ಪ್ರಯುಕ್ತ ಅವುಗಳು ಕಾಲವಾದುದನ್ನು ನೋಡಿದ್ದೇವೆ, ಅದಕ್ಕೆ ಅನೇಕ ನಿದರ್ಶನಗಳು ಇವೆ. ಆದುದರಿಂದ ಈ ರೀತಿಯ ಅನುಕೂಲತೆಗಳನ್ನು ಒದಗಿಸುವುದಕ್ಕೆ ಮಾನ್ಯ ಮಂತ್ರಿಗಳು ವಿಚಾರ ಮಾಡುತ್ತಾರೆಯೆ ? ಮೂರನೆಯದು ಎಂದರೆ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಹೋದವಾರ ವೈರಸ್ ಕಾಯಿಲೆ ಬಂದು ಸುಮಾರು ೫೦ ರಾಸುಗಳು ಕಾಲವಾಗಿವೆ. ನೂರಾರು ರಾಸುಗಳಿಗೆ ಈ ಕಾಯಿಲೆ ತಗುಲಿದೆ, ಅವುಗಳಿಗೆ ಔಷಧದ ಅಗತ್ಯ ಇದೆ. ಇದರ ಬಗ್ಗೆ ಏನು ಏರ್ಪಾಡು ಮಾಡಿದ್ದಾರೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ

ಶ್ರೀ ಬಿ. ಎ. ಮೊಹಿನುದ್ದೀನ್.—ಸ್ವಾಮಿ. ಮೈಸೂರು ನಗರದ ಪಶುವೈದ್ಯಶಾಲೆ ೧೯೫೪ ನೇ ಇಸವಿಯಿಂದಲೂ ಬಾಸಗಿ ಕಟ್ಟಡದಲ್ಲಿ ಇತ್ತು. ಅದು ನಂಜರಾಜಬಹದ್ದೂರ್ ಟ್ರಸ್ಟ್‌ಗೆ ಸಂಬಂಧಪಟ್ಟ ಬಿಲ್ಡಿಂಗ್. ಆ ಬಿಲ್ಡಿಂಗ್‌ನ್ನು ಸರಕಾರದವರು ೧೯೫೫ನೇ ಇಸವಿಯಲ್ಲಿ ೧೩ ಲಕ್ಷ ರೂಪಾಯಿಗಳನ್ನು ಕೊಟ್ಟು ನಿವೇಶನ ಸಹಿತವಾಗಿ ಹಾಸ್ಪಿಟಲ್‌ಗೋಸ್ಕರ ಖರೀದಿ ಮಾಡಿದ್ದಾರೆ. ಈ ರೀತಿ ಖರೀದಿ ಮಾಡಿದ ನಂತರ ಆ ಕಟ್ಟಡ ಸರಕಾರದ ಸ್ವಂತದಾಗಿದೆ. ಮೈಸೂರು ಜಿಲ್ಲೆಯಲ್ಲಿರುವ ೯೦ ಪಶುವೈದ್ಯ ಶಾಲೆಗಳಲ್ಲಿ ೮೮ ಸ್ವಂತ ಕಟ್ಟಡದಲ್ಲಿವೆ, ಎರಡು ಮಾತ್ರ ಬಾಡಿಗೆ ಕಟ್ಟಡದಲ್ಲಿವೆ. ಇನ್ನು ಎರಡನೆಯ ಪ್ರಶ್ನೆ ಈ ಪಶುವೈದ್ಯಶಾಲೆಗಳಲ್ಲಿ ಸರ್ಜಿಕಲ್ ಫೆಸಿಲಿಟೀಸ್. ಆಪರೇಷನ್ ಥಿಯೇಟರ್ ಬೇಕು ಎಂದು ಹೇಳಿದ್ದಾರೆ. ಈಗ ಇಲ್ಲಿ ಏನು ಸೌಲಭ್ಯ ಒದಗಿಸಬೇಕಾದರೂ ಅದನ್ನು ಜಿಲ್ಲಾ ಪರಿಷತ್‌ನವರು ಮಾಡಬೇಕು. ಜಿಲ್ಲಾ ಪರಿಷತ್‌ನವರು ಇದನ್ನು ಡಿಸ್ಟ್ರಿಕ್ ಪ್ಲಾನ್‌ನಲ್ಲಿ ಸೇರಿಸಿ, ಬಜೆಟ್‌ನಲ್ಲಿ ಹಣಕೂಡಿಸಿ ಈ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಹಾಗೆ ಹೇಳುವುದಾದರೆ ಇಡೀ ರಾಜ್ಯದಲ್ಲಿ ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿರುವ ಎರಡು ಪಶುವೈದ್ಯಶಾಲೆಗಳಲ್ಲಿ ಮಾತ್ರ ಈ ಫೆಸಿಲಿಟೀಸ್ ಇದೆ. ಇನ್ನು ಬಿಲ್ಡಿಂಗ್ ಗೋಸ್ಕರ ಸೆಂಟ್ರಲ್ ಗೌರ್ನಮೆಂಟ್‌ನಿಂದ ಯಾವತರಹ ಅಸಿಸ್ಟೆನ್ಸ್ ಬರುವುದಿಲ್ಲ. ಸನ್ಮಾನ್ಯ ಸದಸ್ಯರು ಸೆಂಟ್ರಲ್ ಗೌರ್ನಮೆಂಟ್ ಅಸಿಸ್ಟೆನ್ಸ್ ಬರುತ್ತದೆ ಅದನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ ಎಂದು ಕೇಳಿದರು. ಬಿಲ್ಡಿಂಗ್‌ಗೋಸ್ಕರ ಸೆಂಟ್ರಲ್‌ಗೌರ್ನಮೆಂಟ್ ಅಸಿಸ್ಟೆನ್ಸ್ ಇಲ್ಲ. ಮೂರನೆಯದು ಕೆ. ಆರ್. ಪೇಟೆಯಲ್ಲಿ ವೈರಸ್ ಡಿಸೀಸ್ ಬಂದಿದೆ ಎಂದು ಹೇಳಿದ್ದಾರೆ. ಆದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೊಟ್ಟರೆ ಉತ್ತರ ಕೊಡುತ್ತೇನೆ, ಆ ಮಾಹಿತಿ ಸಧ್ಯಕ್ಕೆ ನನ್ನ ಹತ್ತಿರ ಇಲ್ಲ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮೈಸೂರು ನಗರದಲ್ಲಿರುವ ಪಶುವೈದ್ಯಶಾಲೆ ಕಟ್ಟಡವನ್ನು ನಂಜರಾಜ ಬಹದ್ದೂರ್ ಛತ್ರದ ಟ್ರಸ್ಟಿನಿಂದ ಸರಕಾರ ೧೩ ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡಿದೆ ಎಂದು ಹೇಳಿದರು. ಆದರ ಬಗ್ಗೆ ಸುಮಾರು ಮೂರೂ ವರ್ಷದಿಂದ ೫ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಆದುದರಿಂದ ಅದು ಇನ್ನೂ ಸರಕಾರದ ಸ್ವಂತ ಕಟ್ಟಡ ಆಗಿಲ್ಲ. ಅದು ಈಗಲೂ ಬಾಡಿಗೆ ಕಟ್ಟಡವಾಗಿ ಉಳಿದಿದೆ ಎಂಬುದು ಸಚಿವರ ಗಮನಕ್ಕೆ ಬಂದಿದೆಯೇ ?

ಶ್ರೀ ಮಹಮದ್ ಮೊಹಿನುದ್ದೀನ್.—ಸ್ವಾಮಿ, ಇದನ್ನು ೧೩ ಲಕ್ಷ ರೂಪಾಯಿಗೆ ಖರೀದಿ ಮಾಡಿ, ಒಂದು ಕಂತಿನಲ್ಲಿ ೫ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ೧೯೫೬-೫೭ ರಲ್ಲಿ ಎರಡನೇ ಕಂತಾಗಿ ಎರಡೂ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಮೂರನೇ ಕಂತಾಗಿ ಒಂದು ಲಕ್ಷ ರೂಪಾಯಿ ಕೊಡಲಾಗಿದೆ. ಈ ರೀತಿ ಒಟ್ಟು ೮ ಲಕ್ಷ ರೂಪಾಯಿ ಕೊಡಲಾಗಿದೆ. ಉಳಿದಿರತಕ್ಕಂಥ ಹಣವನ್ನು ಕೊಡಲಾಗುವುದು.

ಆ ಕಟ್ಟಡ ಆಗಲೇ ಸರಕಾರದ್ದಾಗಿ ಹೋಗಿದೆ. ದುಡ್ಡು ಮಾತ್ರ ಕೊಡಬೇಕಾಗಿದೆ. ಅದನ್ನು ಕೊಡಲಾಗುವುದು.

ಪ್ರಶ್ನೆ ಸಂಖ್ಯೆ ೭೭೨ (೧೯೯೨) ಸದಸ್ಯರು ಗೈರುಹಾಜರು

ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಕುಂದಾಪುರ ತಾಲ್ಲೂಕಿನಲ್ಲಿ ಪರವಾನಿಗೆ ನೀಡಿರುವ ಬಗ್ಗೆ

೨೩೦೬. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಗಣಿ ಮತ್ತು ಭೂವಿಜ್ಞಾನ ಯಂತ್ರ ಜನ ಸೇವೆ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಶಿಲೆ ಕಲ್ಲು, ಕೆಂಪುಕಲ್ಲು ಮತ್ತು ಮರಳು ತೆಗೆಯಲು ಪರವಾನಿಗೆ ನೀಡಿರುವ ಜನರ ಸಂಖ್ಯೆ ಎಷ್ಟು ?

(ಗ್ರಾಮವಾರು ವಿವರ ನೀಡುವುದು)

ಆ) ಹಾಗಿದ್ದಲ್ಲಿ ಪರವಾನಗಿ ನೀಡಲಾಗಿರುವ ಸ್ಥಳಗಳಾವುವು ಮತ್ತು ಪಡೆದ ಶುಲ್ಕ ಎಷ್ಟು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ, ಯುವಜನ ಸೇವೆ ಹಾಗೂ ಕ್ರೀಡೆಗಳ ರಾಜ್ಯ ಸಚಿವರು).—

ಅ) ಸಾಮಾನ್ಯ ಮರುಳು – ೧
ಕಟ್ಟಡದ ಕಲ್ಲು – ೧
ಲ್ಯಾಟರೈಟ್ ಕೆಂಪುಕಲ್ಲು – ೩

ಒಟ್ಟು ೫ ಗುತ್ತಿಗೆಗಳು

ಆ) ಹಾಲಾಡಿ ಗ್ರಾಮ – ೧ (ಕಟ್ಟಡ ಕಲ್ಲು)
ಕರಕುಂಜೆ ಗ್ರಾಮ – ೨ (ಲ್ಯಾಟರೈಟ್)
ಇಮ್ಮೊಗೆ ಗ್ರಾಮ – ೧ (ಲ್ಯಾಟರೈಟ್)
ಶಂಕರನಾರಾಯಣ – ೧ (ಸಾಮಾನ್ಯ ಮರಳು)

ಈ ಗುತ್ತಿಗೆಗಳನ್ನು ೧೯೮೭–೮೮ನೇ ಸಾಲಿನಲ್ಲಿ ಮಂಜೂರು ಮಾಡಿದ್ದು ಸಂಬಂಧಪಟ್ಟ ಹಿರಿಯ ಭೂವಿಜ್ಞಾನಿಯವರು ಆಡಿಟ್ ರಿಪೋರ್ಟ್ ಕೊಟ್ಟಿರುವುದಿಲ್ಲ. ಹಾಗಾಗಿ ಈ ಗುತ್ತಿಗೆದಾರರು ರಾಯಲ್ಟಿ ಸಂದಾಯ ಮಾಡಿರುವುದಿಲ್ಲ, ಗುತ್ತಿಗೆದಾರರಿಂದ ಮುಂಗಡ ಸ್ಥಿರ ತೆರಿಗೆ ರೂ. ೧೯೭೮–೧೦ ಪೈಸೆ ಅರ್ಜಿ ಶುಲ್ಕ ಪ್ರತಿ ಕ್ವಾರಿ ಗುತ್ತಿಗೆ ಅರ್ಜಿಯೊಂದಿಗೆ ರೂ. ೨೫೦ ರಂತೆ ರೂ. ೧೨೫೦–೦೦ ಮತ್ತು ಠೇವಣಿ ರೂ. ೩೭೫೦–೦೦ ಇಲಾಖೆಗೆ ಸಂದಾಯವಾಗಿದೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಕೇವಲ ನಾಲ್ಕು ಗ್ರಾಮಗಳ ಹೆಸರುಗಳನ್ನು ಮಾತ್ರ ಕೊಟ್ಟಿದ್ದಾರೆ. ನನಗೆ ತಿಳಿದಹಾಗೆ ಕೆಂಪು ಕಲ್ಲು ತೆಗೆಯುವುದು ಕುಂದಾಪುರ, ಬೈಂದೂರು ಗುಜ್ಜಾರ ಇಂತಹ ಇನ್ನೂ ೧೨–೨೦ ಗ್ರಾಮಗಳಲ್ಲಿ ಶಿಲೆ ಕಲ್ಲು ಕ್ವಾರಿಗಳು ಇವೆ. ಇಲ್ಲಿ ಅನ್ ಅಥರೈಜ್ ಆಗಿ ಕ್ವಾರಿಯಾಗುತ್ತಿದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ, ಈಗ ಅವರು ಯಾರ್ಯಾರಿಗೆ ಪರವಾನಿಗೆಯನ್ನು ಕೊಟ್ಟಿದ್ದಾರೋ ಅಲ್ಲಿ ಕೂಡ ೫ ಸೆನ್ಸ್ ೧೦ ಸೆನ್ಸ್ ವಶಾತ್ರ ಗುತ್ತಿಗೆಗೆ ತೆಗೆದುಕೊಂಡು ಕಲ್ಲು ತೆಗೆಯುತ್ತಿದ್ದಾರೆ. ಆದರೆ ನಿಜವಾಗಿಯೂ ಎಕರೆಗಟ್ಟಲೆ ಯಲ್ಲ ಕಲ್ಲು ತೆಗೆಯುತ್ತಿರುವುದುಂಟು. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎರಡನೆಯದಾಗಿ ಇದರಲ್ಲಿ ರೆವಿನ್ಯೂ ಡಿಪಾರ್ಟ್‌ಮೆಂಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮತ್ತು ಪೋಲೀಸ್ ಇಲಾಖೆ